ಅ) ಕೃಷಿಗೆ ಸಂಬಂಧಪಟ್ಟ ಉತ್ತೇಜನಗಳನ್ನು ನೀಡಲು ಖಾಸಗಿ ಸಂಸ್ಥೆಗಳ ಮುಖಾಂತರ ಕೆಲಸ ನಿರ್ವಹಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಸಂಸ್ಥೆಗಳಿಂದ ರೈತರಿಗೆ ಆಗುತ್ತಿರುವ ಕೆಲವೊಂದು ಅನ್ಯಾಯಗಳ ವಿರುದ್ದ ಸರ್ಕಾರ ತೆಗೆದುಕೊಂಡ ಕ್ರಮಗಳಾವುವು?

ಶ್ರೀ ಶಿವರಾಜ್ ಎಸ್ ತಂಗಡಗಿ(ಕೃಷಿ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಕೊಬ್ಬರಿ ಖರೀದಿಗೆ ಬೆಂಬಲ ಬೆಲೆ

214(403) ಶ್ರೀ ಶಿವಲಿಂಗೇಗೌಡ ಕೆ ಎಂ:(ಅರಸೀಕೆರೆ) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೀನ ವರ್ಷಗಳಲ್ಲಿ ಕೊಬ್ಬರಿ ದರ ಬಹಳ ಕುಸಿದು ಬಹುತೇಕ ಎಲ್ಲಾ ರೈತರು ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ರಾಜ್ಯ ಸರ್ಕಾರ ಬೆಂಬಲ ಬೆಲೆ ನೀಡಿ ಕೊಬ್ಬರಿ ಖರೀದಿಸಲು ಕಾರ್ಯಕ್ರಮ ಹಮ್ಮಿಕೊಂಡಿದೆಯೇ

ಶ್ರೀ ಶಿವರಾಜ್ ಎಸ್ ತಂಗಡಗಿ(ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು)

ಅ) ಗಮನಕ್ಕೆ ಬಂದಿದೆ.

ಹಿಂದಿನ 3 ವರ್ಷಗಳಲ್ಲಿ ಕೊಬ್ಬರಿಯ ಸರಾಸರಿ ಮಾದರಿ ಬೆಲೆ ಹಾಗೂ ಬೆಂಬಲ ಬೆಲೆ ಈ ಕೆಳಗಿನಂತಿರುತ್ತದೆ.

ವರ್ಷ	ಸರಾಸರಿ ಮಾದರಿ ಬೆಲೆ (ರೂ.ಪ್ರತೀ ಕ್ವಿಂ.ಗೆ)	ಬೆಂಬಲ ಬೆಲೆ (ರೂ.ಪ್ರತೀ ಕ್ವಿಂ.ಗೆ)
2007–08	3.784/–	3,910/–
2008–09	4,2771/–	4,700/–
2009–10	4.533/–	4,700/– +300/–
2010–11	4,349/–	4,700/–

ಈ ಮೇಲಿನ ಅಂಕಿ ಅಂಶಗಳಿಂದ ಕೊಬ್ಬರಿ ಬೆಲೆಯು ಕೇಂದ್ರ ಸರ್ಕಾರವು ಘೋಷಿಸಿದ ಬೆಂಬಲ ಬೆಲೆಗಿಂತ ಕಡಿಮೆ ಬೆಲೆಯಲ್ಲಿ ಇರುವುದು ಸ್ಪಷ್ಟವಾಗುತ್ತದೆ.

ಆ) ಹೌದು,

2010–11ನೇ ಸಾಲಿನಲ್ಲಿ ಉಂಡೆ ಕೊಬ್ಬರಿ ಬೆಲೆ ಕುಸಿತಕ್ಕೊಳಗಾಗಿರುವುದರಿಂದ, ಕೊಬ್ಬರಿ ಬೆಳೆಗಾರರ ಹಿತದೃಷ್ಟಿಯಿಂದ ಭಾರತ ಸರ್ಕಾರವು ಘೋಷಿಸಿದ ಎಫ್.ಎ.ಕ್ಯೂ. ಗುಣಮಟ್ಟದ ಕೊಬ್ಬರಿಗೆ ಪ್ರತೀ ಕ್ವಿಂಟಾಲ್‌ಗೆ ರೂ.4,700/–ರಂತೆ ಭಾರತ ಸರ್ಕಾರದ ನ್ಯಾಫೆಡ್ ಸಂಸ್ಥೆಯ ಮುಖಾಂತರ ಖರೀದಿಸಲು ರಾಜ್ಯ ಸರಕಾರವು ಆದೇಶಿಸಿರುತ್ತದೆ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿಯಮಿತ, ಬೆಂಗಳೂರು ಇವರು ರಾಜ್ಯ ನೋಡೆಲ್ ಏಜೆನ್ಸೀಯಾಗಿ ಕಾರ್ಯನಿರ್ವಹಿಸುತ್ತಿದೆ.

ಕೃಷಿ ಉಪಕರಣಗಳಿಗೆ ರಿಯಾಯಿತಿ

215(588) ಶ್ರಿ ಸಿದ್ದು ಸವದಿ:(ತೇರದಾಳ್) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2010–11ನೇ ಸಾಲಿಗೆ ಕೃಷಿ ಉಪಕರಣಗಳು ಮತ್ತು ಬೀಜ, ಗೊಬ್ಬರ, ಕ್ರಿಮಿನಾಶಕ ಹಾಗೂ ಹನಿ ನೀರಾವರಿ ಮತ್ತು ಟ್ರಾಕ್ಟರ್‌ಗಳಿಗೆ ಗೊತ್ತುಪಡಿಸಿದ ರಿಯಾಯಿತಿ ಪ್ರಮಾಣಗಳೆಷ್ಟು; (ಪ್ರತ್ಯೇಕವಾಗಿ ಸಂಪೂರ್ಣ ವಿವರ ನೀಡುವುದು)

ಆ) ಕಳೆದ ಮೂರು ವರ್ಷಗಳಿಂದ ಕೃಷಿ ಉಪಕರಣಗಳು ಮತ್ತು ಬೀಜ ಗೊಬ್ಬರಕ್ಕೆ ಹಾಗೂ ಹನಿ ನೀರಾವರಿ ಸೇರಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳೆರಡು ನೀಡಿರುವ ಸಬ್ಸಿಡಿಗಳ ಪ್ರಮಾಣವೆಷ್ಟು?

ಶ್ರೀ ಶಿವರಾಜ್ ಎಸ್ ತಂಗಡಗಿ(ಕೃಷಿ ಸಚಿವರು):

ಅ) I. ಕೃಷಿ ಉಪಕರಣ,

2010–11ನೇ ಸಾಲಿನಲ್ಲಿ ಕೃಷಿ ಉಪಕರಣಗಳನ್ನು ಕೃಷಿ ಇಲಾಖೆಯ ದರ ಕರಾರಿನಲ್ಲಿ ಅನುಮೋದಿತ ಕನಿಷ್ಠ ದರದ ಶೇ.50 ಅಥವಾ ಇಲಾಖೆ ವತಿಯಿಂದ ನಿಗಧಿಪಡಿಸಿದ ಗರಿಷ್ಠ ಸಹಾಯಧನ ಒದಗಿಸಲಾಗಿದೆ.(ಅನುಬಂಧ–I)

II. ಬಿತ್ತನೆ ಬೀಜ